ಒ ಎಸ್ 109/2023 ಪಿ.ಡಬ್ಲ್ಯೂ 1

ಇಂದು ದಿಃ 17.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ತಂದೆ 2019 ರಲ್ಲಿ ಹಾಗೂ ನನ್ನ ತಾಯಿ 2020 ರಲ್ಲಿ ಮೃತಪಟ್ಟರು. 1ನೇ ಪ್ರತಿವಾದಿ ಗಂಡ ನನ್ನ ತಾಯಿಯ ತಮ್ಮ. ನನ್ನ ತಂದೆ ತಾಯಿ ಮೃತಪಟ್ಟಾಗ ಅವರಿಗೆ ಗಂಡು ಮಕ್ಕಳು ಇಲ್ಲ ಎಂದು 1ನೇ ಪ್ರತಿವಾದಿ ಗಂಡ ಅಂತಿಮ ವಿಧಿ ವಿದಾನ ಮಾಡಿದರು ಎಂದರೆ ಒಬ್ಬರೇ ಮಾಡಿಲ್ಲ ಎಲ್ಲರೂ ಸೇರಿ ಮಾಡಿದ್ದಾರೆ ಎನ್ನುತ್ತಾರೆ. ನವೆಂಬರ್ 2022ರಲ್ಲಿ ಕುಟುಂಬದ ಆಸ್ತಿ ವಿಭಾಗ ಮಾಡಿಕೊಳ್ಳಲು ಮಾತುಕತೆಗೆ ಸೇರಲಾಗಿತ್ತು ಎಂದರೆ ಸರಿಯಲ್ಲ. 4ನೇ ಐಟಂ ಮನೆ ಆಸ್ತಿಯನ್ನು 1ನೇ ಪ ್ರತಿವಾದಿಗೆ ಬಿಟ್ಟುಕೊಟ್ಟು ಅವರೇ ಅದರ ರಿಪೇರಿ ಕೆಲಸ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ. 367/1 ಎ 14 ಗುಂಟೆ, 168/1 ಎ, 76/6 20 ಗುಂಟೆ, 47/1ಎ ರಲ್ಲಿ 9 ಗುಂಟೆ ಹಾಗೂ ಒಂದು ಮನೆ ಇರುತ್ತದೆ. ಬೇರೆ ಯಾವುದೇ ಜಮೀನುಗಳು ಇಲ್ಲ. ನಾನು ಈಗ ಹೇಳಿದ ಆಸ್ತಿಯ ಚೆಕ್ಕುಬಂಧಿ ಗೊತ್ತಿಲ್ಲ. ದಾವಾ ಆಸ್ತಿಗಳು ವಿಭಾಗವಾದರೆ 1ನೇ ಪ್ರತಿವಾದಿಯು 4ನೇ ಐಟಂ ಮನೆ ರಿಪೇರಿ ಮಾಡಿದ ರೂ 7 ಲಕ್ಷ ವಿಭಾಗ ಆಗಬೇಕು ಎಂದರೆ ಮನೆ ರಿಪೇರಿ ಆದ ಬಗ್ಗೆ ನಮಗೆ ಹೇಳಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿ ಮನೆ ರಿಪೇರಿಗೆ ಖರ್ಚು ಮಾಡಿದ್ದನ್ನು ಕೊಡಬೇಕಾಗುತ್ತದೆ ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ರಿಪೇರಿ ಪೂರ್ವದಲ್ಲಿ ಇದ್ದ ಬಾಡಿಗೆದಾರರ ಹಣವನ್ನು ಸಹ 1ನೇ ಪ್ರತಿವಾದಿ ಹಿಂದಿರುಗಿಸಿದ್ದು ಅದನ್ನು ಸಹ ನಾವು ಭಾಗ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.